ಪೂರ್ತಿ ವಿರುದ್ಧವಾದದ ರೀತಿಯಲ್ಲಿ ತೆಗೆದ 'ಪೆದ್ರೊ' ಸಿನಿಮಾದ ಮೂಲಕವೂ ನಾನು ಸಾಕಷ್ಟು ಸಂಗತಿಗಳನ್ನು ಕಲಿತುಕೊಂಡಿದ್ದೇನೆ' ಎನ್ನುತ್ತಾರೆ ಮೇದಿನಿ.

ನಟೇಶ್ ಹೆಗಡೆ ನಿರ್ದೇಶನದ 'ಪೆದ್ರೊ' ಸಿನಿಮಾದಲ್ಲಿ ಮೇದಿನಿ ಮುಖ್ಯ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಅಲ್ಲಿ ಸೆಟ್‌ಗೆ ಹೋಗುವ ಮೊದಲು ಸ್ಕ್ರಿಪ್ಟ್ ಕೂಡ ಅವರಿಗೆ ಸಿಕ್ಕಿರಲಿಲ್ಲ. ಚಿತ್ರೀಕರಣದ ಜಾಗದಲ್ಲಿ ನಿರ್ದೇಶಕರು ಹೇಳಿದ್ದಕ್ಕೆ ರಿಯಾಕ್ಟ್ ಮಾಡುವುದೇ ಅಲ್ಲಿ ಮುಖ್ಯವಾಗಿತ್ತು. ಸದ್ಯಕ್ಕೆ ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನದ ದಂಡಯಾತ್ರೆ ಮಾಡುತ್ತಿರುವ 'ಪೆದ್ರೊ' ಸಿನಿಮಾದ ಭಾಗವಾಗಿರುವುದಕ್ಕೆ ಮೇದಿನಿಗೆ ಸಾಕಷ್ಟು ಹೆಮ್ಮೆಯಿದೆ.

ಇತ್ತೀಚೆಗಷ್ಟೇ ಅವರು ಬಾಲಿವುಡ್‌ಗೆ ಹೋಗಿ 'ಅನುರಾಗ್ ಕಶ್ಯಪ್' ನಿರ್ದೇಶನದ 'ದೊಬಾರಾ' ಸಿನಿಮಾದಲ್ಲಿ ನಟಿಸಿ ಬಂದಿದ್ದಾರೆ. 'ಅದೊಂದು ಅದ್ಭುತ ಅನುಭವ. ಒಬ್ಬ ಮನುಷ್ಯನಾಗಿ, ಸಿನಿಮಾ ನಿರ್ದೇಶಕನಾಗಿ ಅನುರಾಗ್ ಕಶ್ಯಪ್ ಬಳಿ ಕಲಿತುಕೊಳ್ಳುವುದು ಸಾಕಷ್ಟಿವೆ' ಎನ್ನುತ್ತಾರೆ ಅವರು.

ಹಾಗಾದರೆ ಮುಂದಿನ ದಿನಗಳಲ್ಲಿ ಬಾಲಿವುಡ್‌ನಲ್ಲಿಯೇ ನೆಲೆಯೂರುತ್ತೀರಾ ಅಥವಾ ಕನ್ನಡ ಸಿನಿಮಾಗಳನ್ನು ಮಾಡುತ್ತೀರಾ ಎಂದು ಕೇಳಿದರೆ, 'ಕನ್ನಡದಲ್ಲೇ ಇರ್ತೀನಿ. ಹಿಂದಿಗೆಲ್ಲ ಹೋಗುವುದು ಹಣ ಮಾಡ್ಕೊಂಡು ಬರ್ಲಿಕ್ಕಷ್ಟೆ' ಎಂದು ನಗುತ್ತಾರೆ ಮೇದಿನಿ.

'ಹಿಂದಿಯಲ್ಲಿ ನಟಿಸಬೇಕು ಎಂದು ತುಂಬ ಆಸೆಯೇನೂ ಇಲ್ಲ. ಅನುರಾಗ್ ಕಶ್ಯಪ್ ಅವರಂಥ ಒಳ್ಳೆಯ ನಿರ್ದೇಶಕರ ಬಳಿ ಅವಕಾಶ ಸಿಕ್ಕರೆ ಖಂಡಿತ ಹೋಗುತ್ತೇನೆ. ಅದನ್ನು ಬಿಟ್ಟರೆ ಕನ್ನಡದಲ್ಲಿಯೇ ಇರಬೇಕು ಎಂದೇ ನನ್ನ ಆಸೆ. ಇಲ್ಲಿಯೇ ಅವಕಾಶಕ್ಕಾಗಿ ಎದುರು ನೋಡುತ್ತಿದ್ದೇನೆ' ಎನ್ನುವ ಮೇದಿನಿ ಸದ್ಯಕ್ಕೆ ವಿನಯ ರಾಜ್‌ಕುಮಾರ್ ಅಭಿನಯದ 'ಪೆಪೆ' ಸಿನಿಮಾದಲ್ಲಿ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಆ ಪಾತ್ರ ತನಗೆ ಕನ್ನಡ ಸಿನಿಮಾ ಮುಖ್ಯವಾಹಿನಿಗೆ ಒಳ್ಳೆಯ ಪ್ರವೇಶ ಕೊಡುತ್ತದೆ ಎಂಬ ನಿರೀಕ್ಷೆಯಲ್ಲಿ ಅವರದು.

'ನಟನೆ ಎಂದರೆ ಕಲ್ಪನೆಯ ಸನ್ನಿವೇಶದಲ್ಲಿ ಎಷ್ಟಾಗುತ್ತೋ ಅಷ್ಟು ಸತ್ಯವಾಗಿ ಇರುವುದು. ಸುತ್ತಲಿನ ವಾತಾವರಣಕ್ಕೆ ಪ್ರತಿಸ್ಪಂದಿಸುವುದು. ಇದನ್ನು ಸಾಧಿಸುವುದು ತುಂಬ ಸವಾಲಿನ ಕೆಲಸ' ಎನ್ನುವ ಮೇದಿನಿಗೆ ಕೇವಲ ಆರ್ಟ್ ಸಿನಿಮಾಗಳಿಗೆ ಸೀಮಿತವಾಗುವುದು ಇಷ್ಟವಿಲ್ಲ. ಹಾಗೆಂದು ಬರೀ ಕಮರ್ಷಿಯಲ್ ಉದ್ದೇಶದಿಂದಲೇ ಮಾಡುವ ಟೊಳ್ಳು ಸಿನಿಮಾಗಳ ಭಾಗವಾಗುವುದು ಒಪ್ಪಿಗೆ ಇಲ್ಲ. ಅವೆರಡರ ನಡುವಿನ ಬ್ರಿಡ್ಜ್ ಸಿನಿಮಾಗಳ ಮೂಲಕ ತಮ್ಮ ಗುರುತು ಮೂಡಿಸಬೇಕು ಎಂಬ ಹಂಬಲದಲ್ಲಿ ಅವರು ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾರೆ. ■






# ಆ್ಯನಿಮೇಟೆಡ್ ಅಣ್ಣಾವ್ರು!

ಅಣ್ಣಾವ್ರು ಹೊಸ ವೇಷದಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಮಿಂಚುತ್ತಿದ್ದಾರೆ. ಹಾ, ವೇಷ ಹೊಸದಲ್ಲ, ಹಳೆಯದೇ. ಆದರೆ ಕಾಣಿಸಿಕೊಂಡ ರೀತಿ ಹೊಸದು; ಹೊಸ ಕಾಲದ್ದು. 'ಡೇರ್ ಡೆವಿಲ್ ಮುಸ್ತಫಾ' ಸಿನಿಮಾ ನಿರ್ದೇಶಕ ಶಶಾಂಕ್ ಸೋಗಾಲ್, ಆ್ಯನಿಮೇಷನ್ ತಂತ್ರಜ್ಞಾನವೆಂಬ ಹೊಸ ಬಟ್ಟಲಲ್ಲಿ ರಾಜಕುಮಾರ್ ಎಂಬ ಹಳೆಯ ಮಧುಪಾನವನ್ನು ಮೊಗೆದು ಕೊಟ್ಟಿದ್ದಾರೆ. ಕನ್ನಡ ಪ್ರಜ್ಞೆಯ ಶಾಶ್ವತ ಭಾಗವಾಗಿರುವ ರಾಜಕುಮಾರ್ ಎಂಬ ಭಾವತಂತುವನ್ನು ಮೀಟಿದ್ದಾರೆ. ಅದರ ರಿಂಗಣ ಜೋರಾಗಿಯೇ ಇದೆ.



ಶಶಾಂಕ್ ಸೋಗಲ್

ಪೂರ್ಣಚಂದ್ರ ತೇಜಸ್ವಿ ಅವರ ಕೃತಿಯನ್ನು ಆಧರಿಸಿದ 'ಡೇರ್ ಡೆವಿಲ್ ಮುಸ್ತಫಾ', ಶಶಾಂಕ್ ನಿರ್ದೇಶನದ ಮೊದಲ ಸಿನಿಮಾ. ಆ ಚಿತ್ರದ ಪ್ರಚಾರದ ಭಾಗವಾಗಿ ಅವರು ಇತ್ತೀಚೆಗೆ 'ನಿನ್ನಂಥೋರ್‍ಯಾರೂ ಇಲ್ವಲ್ಲೋ ಲೋಕಾದ ಮ್ಯಾಲೆ' ಎಂಬ ರಂಗಗೀತೆಗೆ ಆ್ಯನಿಮೇಷನ್ ದೃಶ್ಯಿಕೆಯನ್ನು ಬಳಸಿ ಪಿಆರ್‌ಕೆ ನಿರ್ಮಾಣ ಸಂಸ್ಥೆಯ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆ ಮಾಡಿದ್ದರು. ಅದು ಸಾಕಷ್ಟು ಮೆಚ್ಚುಗೆ ಗಳಿಸಿದ್ದು ರಾಜ್ ಅಭಿಮಾನಿಗಳಷ್ಟೇ ಅಲ್ಲ, ಚಿತ್ರರಂಗದ ಘಟಾನುಘಟಿಗಳೆಲ್ಲರೂ ಈ ಚಿತ್ರದ ಹಿಂದಿನ ಸೃಜನಶೀಲತೆಯ ಬಗ್ಗೆ ಖುಷಿಯಿಂದ ಹೊಗಳಿದ್ದಾರೆ. ರಾಜಕುಮಾರ್ ಅವರ ರಣಧೀರ ಕಂಠೀರವನ ಪಾತ್ರವನ್ನು ಆ್ಯನಿಮೇಷನ್ ತಂತ್ರಜ್ಞಾನದಲ್ಲಿ ಮೂಡಿಸಿದ್ದು, ಮಲ್ಲಯುದ್ಧದ ರೋಚಕ ಕ್ಷಣಗಳು, ಅಂಬಾರಿ ಸವಾರಿ ವೈಭವದ ಗಳಿಗೆಗಳನ್ನು ಬಹುಸೂಕ್ಷ್ಮವಾಗಿ ರೂಪಿಸಲಾಗಿದೆ. ವಾಸುಕಿ ವೈಭವ್ ಈ ಚಿತ್ರವನ್ನು ಹಾಡಿದ್ದಾರೆ.

ಈ ಹಾಡು ಸುಮಾರು 40 ವರ್ಷಗಳ ಹಿಂದೆ ಪ್ರಸನ್ನ ನಿರ್ದೇಶನದ, ಕೆ.ವಿ. ನಾರಾಯಣ ರಚನೆಯ 'ಹುತ್ತವ ಬಡಿದರೆ' ಎಂಬ ನಾಟಕಕ್ಕಾಗಿ ಸಿ. ವೀರಣ್ಣ ಅವರು ರಚಿಸಿದ ಗೀತೆ. ಬಿ.ವಿ. ಕಾರಂತ ಈ ಹಾಡಿಗೆ ಸಂಗೀತ ಸಂಯೋಜನೆ ಮಾಡಿದ್ದರು. ಈ ಹಾಡು ಹೊಸ ಹುಡುಗರ ಕೈಗೆ ಸಿಕ್ಕಿ, ರಾಜಕುಮಾರ್ ಪರಿಮಳವನ್ನು ಮೈಗೂಡಿಸಿಕೊಂಡು ಮರಳಿ ಬಂದಿದೆ. ಮೈಸೂರು ದಸರೆ ಸಮಯದಲ್ಲಿಯೇ ಬಿಡುಗಡೆಯಾದ ಈ ಸೋಷಿಯಲ್ ಮೀಡಿಯಾದಲ್ಲಿನ ಸಿನಿಮಾಪ್ರೇಮಿಗಳು ಹೆಗಲ ಮೇಲೆ ಹೊತ್ತು ಮೆರೆಸುತ್ತಿದ್ದಾರೆ. ಪಿಆರ್‌ಕೆಯ ಯೂಟ್ಯೂಬ್ ಚಾನಲ್‌ನಲ್ಲಿ ಈವರೆಗೆ ಈ ಹಾಡನ್ನು ಸುಮಾರು ಎರಡು ಲಕ್ಷ ಜನ ವೀಕ್ಷಿಸಿದ್ದಾರೆ.

ಹಾಡಿನ ಕೊಂಡಿ:
https://bit.ly/3atW711